**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/18/.ಸಿ.ಎ.ಎಸ್/2015-16/ಬಸ್ಥಾವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 12.02.2018

**ಸುತ್ತೋಲೆ**

**ವಿಷಯ :** ಖಾಸಗಿ ಅನುದಾನಿತ ಪದವಿ, ಶಿಕ್ಷಣ, ಕಾನೂನು ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಮತ್ತು ಗ್ರಂಥಪಾಲಕರುಗಳಿಗೆ 2006ರ ಯು.ಜಿ.ಸಿ ವೇತನ ಶ್ರೇಣಿ (15600-39100)+6000 ಯಿಂದ ವೇತನ ಶ್ರೇಣಿ (15600-39100)+7000/- ಎ.ಜಿ.ಪಿಯನ್ನು ಹಾಗೂ ವೇತನ ಶ್ರೇಣಿ (15600-39100)+7000 ಯಿಂದ ವೇತನ ಶ್ರೇಣಿ (15600-39100)+8000/- ಎ.ಜಿ.ಪಿಯನ್ನು ಮಂಜೂರು ಮಾಡುವ ಬಗ್ಗೆ.

*****

ಖಾಸಗಿ ಅನುದಾನಿತ ಪದವಿ, ಶಿಕ್ಷಣ, ಕಾನೂನು ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಮತ್ತು ಗ್ರಂಥಪಾಲಕರುಗಳಿಗೆ 2006ರ ಯು.ಜಿ.ಸಿ ವೇತನ ಶ್ರೇಣಿಯ 15600-39100+ ಎ.ಜಿ.ಪಿ ರೂ.6000/- ಯಿಂದ 15600-39100+ ಎ.ಜಿ.ಪಿ ರೂ. 7000/- ಹಾಗೂ 15600-39100+ ಎ.ಜಿ.ಪಿ ರೂ. 7000/- ಯಿಂದ 15600-39100+ ಎ.ಜಿ.ಪಿ ರೂ.8000/- ಮಂಜೂರು ಮಾಡುವ ಸಂಬಂಧದಲ್ಲಿ ಕೇಂದ್ರ ಕಛೇರಿಗೆ ಈಗಾಗಲೇ ಪ್ರಸ್ತಾವನೆಗಳು ಸ್ವೀಕೃತವಾಗಿವೆ. ಇವರುಗಳ ಮೂಲ ಸೇವಾ ಪುಸ್ತಕವನ್ನು ಪರಿಶೀಲನೆಗಾಗಿ ಸಲ್ಲಿಸಲು ಸಂಬಂಧಿಸಿದ ಜಂಟಿ ನಿರ್ದೇಶಕರುಗಳಿಗೆ/ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ. ಹಾಗೂ ಭವಿಷ್ಯದಲ್ಲಿ ಮೂಲ ಸೇವಾ ಪುಸ್ತಕಗಳೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

ಕ್ರೋಢಿಕರಿಸಿದ ಮಾಹಿತಿಯನ್ನು ಅನುಬಂಧದಲ್ಲಿ ಸಲ್ಲಿಸುವ ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚಿನ ಪುಟಗಳು ಇದ್ದಲ್ಲಿ, ಪ್ರತಿ ಪುಟಕ್ಕೂ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರು ಸಹಿಯನ್ನು ಮಾಡಿರಬೇಕು.

'ಸಾಮಾನ್ಯ ಮಾಹಿತಿ ಅನುಬಂಧ' (ಭಾಗ-1)ಕ್ಕೆ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು / ಗ್ರಂಥಪಾಲಕರುಗಳು ಹಾಗೂ ಪ್ರಾಂಶುಪಾಲರು ಕಡ್ಡಾಯವಾಗಿ ಮೊಹರಿನೊಂದಿಗೆ ಸಹಿ ಮಾಡಿರಬೇಕು.

'ಎ.ಪಿ.ಐ. ವಿವರಗಳೊಂದಿಗೆ ಸಮಿತಿಯ ವಿವರ' (ಭಾಗ-2) ರಲ್ಲಿ ಅಂಕಗಳು ಹಾಗೂ ಸಮಿತಿ ಸದಸ್ಯರ ಸಹಿ ಮೊಹರಿನೊಂದಿಗೆ ಒಂದೇ ಪುಟದಲ್ಲಿ ಇರಬೇಕು.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

**ಇವರಿಗೆ:-**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ,ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2) ಪ್ರಾಂಶುಪಾಲರು ಎಲ್ಲಾ ಖಾಸಗಿ ಅನುದಾನಿತ ಪದವಿ, ಶಿಕ್ಷಣ, ಕಾನೂನು ಕಾಲೇಜುಗಳು.
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ ಬೆಂಗಳೂರು (ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.)
4) ಕಛೇರಿ ಪ್ರತಿ